Rega No M 1229 | 43rd Year | Sri 'Satyavadi' Mysore | 6—5—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಂಮನೆ ಸಿಂಸ್ಕೇದಾರ್ ಎ. ಎ ಸುಬ್ಬರಾಯುರು [ಬಿಡಿ ಪ್ರತಿ 3ಪೈ

Protectthe cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಜಂಷಡುರದಲಿ ಪೋಲೀಸರ ಗುಂಡಿನೇಟಿನಿಂದ ಇಬರ ಮರಣ

ಜಂಷಡ್ಪುರ 5 — ತಾತಾ ನಗರ ಮೂರ್ಸಲಿಂಗು ಯಾರ್ಡಿನಲ್ಲಿ ವ್ಯಾಗನ್‌ಗಳನ್ನು ಮುರಿಯುತ್ತಲಿದ್ದ ವ್ಯಾಗನ್ ಎತ್ತುವ ಕೆಲಸದವರ ಮೇಲೆ ರೈಲ್ವೆ ರಕ್ಷಣಾ ಪೊಲೀಸರು ಗುಂಡು ಹಾರಿಸಲು ಈರ್ವರು ಮರಣಹೊಂದಿ ಕೆಲವರು ಗಾಯಗೊಂಡರು

ಶಾಲೆ ತೆಗೆಯುವುದಿಲ್ಲ

ಎರ್ನಾಕುಲ 5 — ಕೆಥೋಲಿಕ್ ಸೈಮರಿ ಶಾಲೆಗಳನ್ನು ಮತ್ತೆ ಆರಂಭಿಸದಿರುವ ನಿರ್ಧಾರವನ್ನು ಕೇರಳ ಕೆಥೋಲಿಕ್ ವಿಶೇಷ ಸಮ್ಮೇಳನ ಅಂಗೀಕರಿಸಿದೆ

ಪೂರ್ತಿ ಬಳಸಿಲ್ಲ

ನವ ದೆಹಲಿ 5 — ಗೃಹ ಮಂತ್ರಿ ಶ್ರೀ ಬಿ ಎನ್ ದಾತಾರರು ಈ ದಿನ ರಾಜ್ಯ ಸಭೆಯಲ್ಲಿ ಹೇಳಿಕೆಯಿತ್ತು, ಹರಿಜನ ಅಭಿವೃದ್ಧಿ ನಿಧಿಯನ್ನು ಪ್ರಾಂತಗಳು ಸಂಪೂರ್ಣ ಉಪಯೋಗಿಸಿಲ್ಲವೆಂದರು

ಮಿಶ್ರ ಮಂತ್ರಿಮಂಡಲ

ಉಟಕ್ 5 — ಗಣತಂತ್ರ ಪರಿಷತ್ತಿಗೆ ಮಾಡನೆ ಮಿಶ್ರ ಮಂತ್ರಿಮಂಡಲ ರಚನೆ ಮಾಡಲು ಉತ್ಕಲ ಕಾಂಗ್ರೆಸು ಕಾರ್ಯಕಾರಿ ಸಮಿತಿ ನಿರ್ಧರಿಸಿದೆ.

ಸೌರ್ಯಶಕ್ತಿ ಹೆಚ್ಚಿದೆ

ಫ್ಲಾಗ್‌ಸ್ಟಾಫ್‌ನ ಲೋವೆಲ್ ಅಬ್ಸರ್ವೇಟರಿಯ ಖಗೋಲ ಶಾಸ್ತ್ರಜ್ಞರು ಹೇಳಿಕೆಯಿತ್ತು, ಕಳೆದ 5 ವರ್ಷಕ್ಕಿಂತ ಸೌರ್ಯನು ಶೇಕಡ 3 ರಷ್ಟು ಇನ್ನೂ ಪ್ರಕಾಶವಾಗಿರುವನೆಂದು ತಿಳಿಸಿದರು.

ವಾಷಿಂಗ್ಟನ್ 5 — ಭಾರತ ಪ್ರಗತಿ ವೇಗವಾಗಿರಬೇಕೆಂದು ಅಧ್ಯಕ್ಷ ಐಸೆಹೋವರರು ಅಭಿಪ್ರಾಯಪಟ್ಟರುವರು

ಟಿಬೆಟ್ ಚರ್ಚೆ

ನವ ದೆಹಲಿ 5— ಲೋಕಸಭೆ 8 ನೆಯ ತಾ|| ಟಿಬೆಟ್ಟಿನ ಬಗ್ಗೆ ಚರ್ಚಿಸುವುದು

ಖೋತಾ ಬೇಡ

ವಾಷಿಂಗ್ಟನ್ 5 — ಎದೇಶಿ ನೆರವು ಖೋತಾ ಆಗಕೂಡದೆಂದು ಮಾಜಿ ಅಧ್ಯಕ್ಷ ಟ್ರೂಮನ್ ತಿಳಿಸಿದ್ದಾರೆ

ಬಾಲಕನನ್ನು ಹೊಡೆದರೆಂದು ಪ್ರದರ್ಶನ

ಬೆಂಗಳೂರು 5 — ಅಲಸೂರಿನ 5 ನೂರು ನಿವಾಸಿಗಳಿಗೂ ವಿಾರಿದ ಜನ ಅಲಸೂರು ರಸ್ತೆಯಲ್ಲಿರುವ ಸೇನಾಧಿಕಾರಿ ಲೆ|| ಕ|| ಕೆ ಸಾಂಧೂರವರ್ಮ ಮನೆ ಮುಂದೆ ಪ್ರದರ್ಶನ ಮಾಡಿದರು ಈ ಬಂಗಲೆಯಲ್ಲಿ ಮಾವಿನಹಣ್ಣು ಕೊಯ್ಯಲು ಈರ್ವರು ಹುಡುಗರು ಹೋದರು, ಮನೆಯವರೋರ್ವರು ಇವರನ್ನು ನೋಡಲು ಓರ್ವ ಪಠಾರಿ ಆದ ಜಯಕುಮಾರನೆಂಬವನು ಸಿಕ್ಕಿಬಿದ್ದ ಅವನನ್ನ ಊಮಿನಲ್ಲಿ ಕೂಡಿ ಪೋಲೀಸರಿಗೆ ತಿಳಿಸಲಾಯಿತು ಪೋಲೀಸರು ಬರುವದರೊಳಗೆ ಕಿಟಕಿಯಿಂದ ಹಾರಿ ಹುಡುಗ ಪಠಾರಿ ಆದ ಜಯಕುಮಾರ ಸೋಮವಾರ ಸಂಜೆ ವರೆಗೆ ಮನೆಗೆ ಹೋಗಲಿಲ್ಲ. ಹೊಡೆತದಿಂದ ಹುಡುಗ ಮರಣಹೊಂದಿರಬಹುದೆಂದು ಜನರಿಗೆ ಅನಿಸಿ ಮನೆ ಮುರು ಗುಂಪು ಸೇರಿದರು — ಎಂದು ಹೇಳಲಾಗಿದೆ ಹಾಗೇನು ನಡೆದಿಲ್ಲವೆಂದು ಡಿ ಐ ಜಿ ಶ್ರೀ ಸಿ ಚಾಂದಿ ತಿಳಿಸಿದರು

— × —

ಭಟ್ಟಿಳಿನ ಕೂಪಪ್ಪ ಎಂಬವನ್ನು 2 ನೆಯ ತಾ|| ತನ್ನ ದೋಣಿ ನೋಡಲು ಹೋದಾಗ ವಿಂಜುಬಡಿದು ಸತ್ತನು

ವಿವಿಧ ವರ್ತಮಾನ

ಶ್ರೀನಗರ 4 — ಈ ತಿಂಗಳು 22 ನೆಯ ತಾ|| ಆಚಾರ್ಯ ವಿನೋಬಾ ಕಾಶ್ಮೀರ ಪ್ರಾಂತವನ್ನು ಲಕನಪುರ ಗಡಿ ಮೂಲಕ ಪ್ರವೇಶಿಸುವರು.

ಬೆಳಗಾಂ 5 — ನಾಳೆಯಿಂದ 15 ದಿವಸಗಳ ವರೆಗೆ ಬೆಳಗಾಂನಲ್ಲಿ ಮೆರವಣಿಗೆ, ಸಭೆ ನಿಶೇಧ ಆಜ್ಞೆ ಮತ್ತೆ ಜಾರಿ ಆಗಿದೆ

ಮಂಗಳೂರು — ವಿಧಾನಸಭೆಯಿಂದ ಸುರತ್ಕಲ್‌ಗೆ ನಡೆಯುವ ಉಪ ಚುನಾವಣೆಗೆ ಕಾಂಗ್ರೆಸಿನ ಶ್ರೀ ಕೆ. ಧೂಮಪ್ಪ ಕಮ್ಯುನಿಸ್ಟ್ ಪಕ್ಷದ ಶ್ರೀ ಎಂ ಎಚ್ ಕೃಷ್ಣಪ್ಪ ಮತ್ತು ಪಿ ಎ ಸ್ಪಿ ಪಕ್ಷದ ಡಾ|| ಎ. ಸಂಜೀವಯ್ಯ ಸ್ಪರ್ಧಿಸುವರು

ನವ ದೆಹಲಿ 5 — ಈ ತಿಂಗಳು 25 ರಿಂದ ಸುಪ್ರೀಂ ಕೋರ್ಟಿನ ಬೇಸಿಗೆ ರಜ ಆರಂಭವಾಗುವದು ಆಗಸ್ಟ್ 3 ನೆಯ ತಾ|| ಸುಪ್ರೀಂ ಕೋರ್ಟು ಆರಂಭವಾಗುವದು.

ಮೈಸೂರು 5 — ಭಾರತ ಕೃಷಿಕ ಸಮಾಜದ ನೀತಿ ರಚನೆ ಮಾಡುವ ಸಮಿತಿಯಾದ ಅಖಿಲ ಭಾರತ ರೈತರ ಸಮಿತಿ ನಾಗ್ಪುರಿಂದ ಸಹಕಾರ ವ್ಯವಸಾಯ ನಿರ್ಣಯಕ್ಕೆ ಸಾಮಾನ್ಯ ಒಪ್ಪಿಗೆ ನೀಡಿದೆ

ಏಪ್ರಿಲು 25 ಕ್ಕೆ ಕೊನೆಯಾದ ವಾರದಲ್ಲಿ ಬೆಳಗಾಂ ಮತ್ತು ಹುಬ್ಬಳ್ಳಿಯಿಂದ ಬಂದಿರುವ ವಾರ್ತೆಯಂತೆ ಇಕ್ಫ್ಲುಯೆಂಜದಿಂದ 970 ಪೀಡಿತರಾಗಿದ್ದು ಸಾವೇನೂ ವರದಿ ಆಗಿಲ್ಲ.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

7 ಅಮಾವಾಸ್ಯೆ ಭರಣಿ

ಶವ ಪತ್ತೆ

ಬೆಂಗಳೂರು ಶಂಕರಪುರದಿಂದ ಶಂಕರ ಮಠದ ರಸ್ತೆಯಲ್ಲಿ ಮಂಗಳವಾರ 45 ವರ್ಷದಾತನ ಪತ್ತೆ ಆಯಿತು ಆತನು ಚಿನ್ನಬೆಳ್ಳಿ ಕೆಲಸದ ಶಿವಾನಂದಾಚಾರಿ ಎಂದು ಪತ್ತೆ ಹಚ್ಚಲಾಯಿತು ಸೋಮವಾರ ರಾತ್ರಿ ಆತ ಗಾಡಿಯಲ್ಲಿ ಮನೆಗೆ ಹೋಗುತ್ತಿದ್ದನೆಂದು, ಆತಂಕಪಟ್ಟು ಕೊಂಡು ಕೆಳಗಿಳಿದು ಕುಸಿದನೆಂದು ಪೋಲೀಸರಿಗೆ ವರದಿ.

ವಿಶಾಖಪಟ್ಟಣ ಜಿಲ್ಲೆಯ ಸೆಣಬು ಗಿರಣಿಯ 4 ಸಾವಿರ ಕಾರ್ಮಿಕರ ಪೈಕಿ 2200 ಕಾರ್ಮಿಕರು ಮುಷ್ಕರಿಸಿದ್ದಾರೆ ಈ ತಿಂಗಳು 1 ನೆಯ ತಾ|| ನಿಂದ ಮುಷ್ಕರ ಆರಂಭವಾಯಿತು 186 ಕಾರ್ಮಿಕರನ್ನ ಕಲ್ಕತ್ತಾದಿಂದ ಕರಿಸಿ, ಇಲ್ಲಿನ 286 ಕಾರ್ಮಿಕರನ್ನು ನಿವೃತ್ತಿ ಮಾಡಿದುದೇ ಈ ಮುಷ್ಕರಕ್ಕೆ ಕಾರಣ.

ಮೈಸೂರು 4 — ಭೂ ಸುಧಾರಣೆ ಜಾರಿಗೆ ತರುವಾಗ ಗೋವಾಳಗಳಿಗೆ ಅವಕಾಶವಿರಬೇಕೆಂದು ಭಾರತ ಕೃಷಿಕ ಸಮಾಜದ ಆಶ್ರಯದಲ್ಲಿ ನಡೆದ ಅಖಿಲ ಭಾರತ ಹಸ್ಬೆಂಡ್ರಿ ಸಮ್ಮೇಳನದಲ್ಲಿ ಒತ್ತಾಯಪಡಿಸಲಾಯಿತು.

ನವ ದೆಹಲಿ 5 — ಹಾಸನ-ಮಂಗಳೂರು ರೈಲ್ವೆ ಮಾರ್ಗ ತಳ್ಳಣದಲ್ಲಿ ಆಗಲಾರದೆಂದು ಕೇಂದ್ರ ರೈಲ್ವೆ ಮಂತ್ರಿ ಶ್ರೀ ಜಗಜೀವನರಾಂ ಲೋಕಸಭೆಯಲ್ಲಿ ತಿಳಿಸಿದರು

ಮಾಸ್ಕೋ 5 — ಈ ವರೆಗೆ ಭೌತ ಶಾಸ್ತ್ರಕ್ಕೆ ಗೊತ್ತಿಲ್ಲದ ಹೊಸ ಶಕ್ತಿಯೊಂದು ಮುಂದೆ ಗೋಚರವಾಗುವುದೆಂದು ರಷ್ಯದ ವಿಜ್ಞಾನಿ ನಿಕೊಲಾಯ್ ಕೊಜೆರೆವ್ ತಿಳಿಸಿದ್ದಾರೆ

ವಿವಿಧ ವಿಷಯಗಳು

ನವದೆಹಲಿ 4— ಕೇಂಬದಲ್ಲಿ ಪಠ್ಯಪುಸ್ತಕಗಳ ವಿಷಯದಲ್ಲಿ ಕೇಂದ್ರವು ಕ್ಕೆಹಾಕುವಂತಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ನವದೆಹಲಿ 5— ಎಲ್ಲ ವಿಶ್ವವಿದ್ಯಾನಿಲಯಗಳೂ ಕನಿಷ್ಠ ಪಕ್ಷ 180 ಕೆಲಸದ ದಿನಗಳ ವ್ಯವಸ್ಥೆ ಹೂಡಬೇಕೆಂದು ವಿಶ್ವವಿದ್ಯಾನಿಲಯ ಗ್ರಾಂಟ್ಸ್ ಕಮಿಷನ್ನು ನವರು ಸಲಹೆ ಮಾಡಿದ್ದಾರೆ.

ನವದೆಹಲಿ 5— ದೆಹಲಿಯ ಕೆಂಪುಕೋಟೆಯನ್ನು ನೋಡಲು ಬಂದವರ ಸಂಖ್ಯೆ 58–59 ರಲ್ಲಿ 694863 ಎಂದೂ, ಅವರಿಗೆ ಟಿಕೀಟು ಮಾರಿದುದರ ಪರಿಣಾಮವಾಗಿ ಬಂದ ಹಣ 84853–71 ರೂಗಳೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು.

ನವದೆಹಲಿ 2— ಚೈನಾದಿಂದ ಭಾರತ ಮತ್ತು ಅದರ ನಾಯಕರ ಮೇಲೆ ಮಾಡಿರುವ ಅಪವಾದನೆಗಳು ಬೇಜವಾಬ್ದಾರಿಯುತವೂ ಸರಿಯಲ್ಲದವೂ ಆಗಿವೆಯೆಂದು ಪಂ|| ನೆಹರೂ ರಾಜ್ಯಸಭೆಯಲ್ಲಿ ತಿಳಿಸಿದರು ಅದರೂ ಚೈನಾಕ್ಕೆ ವಿಶ್ವಸಂಸ್ಥೆಯಲ್ಲಿ ಸದಸ್ಯತನದ ಬಗ್ಗೆ ಭಾರತದ ಹಿಂದಿನ ನಿಲುವು ಒದಲಾಗಿಲ್ಲವೆಂದೂ ತಿಳಿಸಿದರು.

ತಾ || 2 ರಂದು ಬೆಳಿಗ್ಗೆ ಬೆಳಗಾವಿಯಿಂದ ಬೆಂಗಳೂರು ಕಡೆಗೆ ಹೋಗುತ್ತಿದ್ದ ಒಂದು ಟೂರಿಂಗು ಕಾರನ್ನು ಗೋವಾ ಬ್ಯಾಂಚು ಸಬ್ ಇನ್ಸ್‌ಪೆಕ್ಟರು ಶೀ ಜೋಗ್ ಮತ್ತು ಶ್ರೀ ಅಡ್ಕಂಪರು ಬೆಳಗಾವಿಯಿಂದ ಬೆನ್ನುಹತ್ತಿ ಧಾರವಾಡದ ಹತ್ತಿರ ಹಿಡಿದು ಝಾಡತಿ ಮಾಡಲಾಗಿ 150 ಬಾಟ್ಲಿ ಪೋರ್ಚುಗೀಸ್ ವಿದೇಶೀ ಶೇರೆ ದೊರೆಯಿತು : ಕಾರಿನಲ್ಲಿ ಕುಳಿತ ಮೂರು ಜನರನ್ನು ಹಿಡಿದು ಕಾರನ್ನು ಜಪ್ತಿ ಮಾಡಿರುವರೆಂದೂ, ಈ ಟೂರಿಂಗು ಕಾರು ಇಲ್ಲಿಯ ಓರ್ವ ವಕೀಲರದೆಂದೂ ತಿಳಿಯಬರುತ್ತದೆ.

ನವದೆಹಲಿ 3— 3 ಮಕ್ಕಳಿಗಿಂತ ಹೆಚ್ಚು ಪಡೆದವರಿಗೆ ಜುಲ್ಮಾನೆ, ಗಂಡಸರು 21 ವರ್ಷಕ್ಕೆ ಮುಂಚೆ, ಸ್ತ್ರೀಯರು 18 ವರ್ಷಗಳ ಮುಂಚೆ ಮದುವೆಯಾದಲ್ಲಿ ಸಜಾ ವಿಧಿಸಬೇಕೆಂಬ ಮತ್ತು ಗರ್ಭಸ್ರಾವವು ನ್ಯಾಯಸಮ್ಮತವೆಂಬ ವಿಷಯಗಳನ್ನೊಳಗೊಂಡ ಜನಸಂಖ್ಯೆ ಮಸೂದೆಯನ್ನು ಮಂಡಿಸುವದನ್ನು ಲೋಕಸಭೆಯು 89 – 30 ವೋಟುಗಳಿಂದ ತಿರಸ್ಕರಿಸಿತು ; ಬಾಲಕೃಷ್ಣ ವಾಸ್ನೀಕರ್ ಎಂಬ ಕಾಂಗ್ರೆಸ್ಸು ಸದಸ್ಯರು ತಂದ ಮಸೂದೆ ಇದು ; ಭಾರತ ಆರೋಗ್ಯಮಂತ್ರಿ ಅಂಬೇಕರರು ಇದನ್ನು ವಿರೋಧಿಸುತ್ತಾ ' ಇದು ಪ್ರತಿ ಮನೆಯ ಶಾಂತತೆಯನ್ನು ಭಂಗಪಡಿಸುವುದು ' ಎಂದು ಹೇಳಿದರು.

SHAKTI SUDHA

A Superb Tonic

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅ ಶೋ ಕಾ ಫಾರ್ಮಸಿ

ಶಾನ್ಸ್‌ಡೌನ್ ಬಜಾರ್ ಮೈಸೂರು

For Quality Printing

L. N. Press

Sivarampet, Mysore

ಗೋಂಕ್ಷಣಾ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯುವಲಿ ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ವುಡ್‌ಲಾಂಡ್

Crowded 5th Week

ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನ್ನಿಸುವ ಚಿತ್ರ

ಅನಾಡಿ

(ಹಿಂದಿ)

ತಾರಾಗಣ— ನೂತನ್, ರಾಜ್ ಕಪೂರ್ ವೋತೀಲಾಲ್, ಶುಭಾ ಖೋಟೆ

ಅಪೆರಾ— 3–5–59 ರಿಂದ

ಪಿಳ್ಳೈಕನಿಯಮುದು ತಮಿಳು

ನಟವರ್ಗ— ರಾಜೇಂದ್ರನ್, ವೀರಪ್ಪ, ಇ ವಿ ಸರೋಜ, ಎಂ ಎನ್ ರಾಜಂ, ಮುತ್ತುಲಕ್ಷ್ಮಿ, ಅಂಗಮುತ್ತು

ಪ್ರತಿದಿನ 3 ಆಟಗಳು



.... ಸೋಲಾರ್ ಫನೆಕ್ಸ್ ....

Edited, Printed & Published by Dharma Prachara Nirata M S Krishna Rao, at the Satyavadi Press Chamarajanagar, Mysore